# ಮೋಹಚುಂಬಿತ ಮಾಯೆ

■ ಕೆ.ಟಿ. ಗಟ್ಟಿ

## ಕೇದಾರದಲ್ಲಿ ನರಹರಿಯನರಸುತ್ತಾ..

ಅಭಿ ಓಡಿಕೊಂಡು ಬಂದು ಸನ್ಮತಿಯನ್ನು ಎಳೆದು ದೂಡಿ ಕೆಳಗೆ ಕೂರಿಸಿ, ಸುಕೃತಿಯನ್ನು ಎಳೆದು ಸನ್ಮತಿಯಿಂದ ದೂರ ಕುಳ್ಳಿರಿಸಿ, 'ಏನು ಮಾಡ್ತಾ ಇದ್ದೀರಿ ನೀವಿಬ್ರು? ಏನು ಯೋಚನೆ ನಿಮ್ದು? ಪೊಲೀಸ್ ಸ್ಟೇಷನಿಗೆ ಹೋಗೋದಾ; ಜೈಲಿಗೆ ಹೋಗೋದಾ?' ಎಂದು ಕೇಳಿ, ಅಮರೇಶನ ಕಡೆಗೆ ತಿರುಗಿ, 'ನೀನು ಏನು ಮಾಡ್ತಾ ಇದ್ದದ್ದು? ಇವರು ಹೊಡ್ಕೊಂಡು ಕೈಕಾಲು ಮುರ್ಕೊಂಡು ಆಸ್ಪತ್ರೆಗೆ ಹೋಗ್ಲಿ ಅಂತಂದುಕೊಂಡಿದ್ದೀಯ?' ಎಂದ. ಅಮರೇಶ ಹಾಗೆಯೇ ಕುಳಿತಿದ್ದ. 'ಜೀವ ಇದ್ಯಾ ನಿಂಗೆ?' ಎಂದ ಅಭಿ. ಆಗಲೂ ಅಮರೇಶನಲ್ಲಿ ಸ್ಪಂದನ

